ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ

ಸಿ. ಸಿ. **27/2016**

**CW-62**

**PW-51**

**ಹೆಸರುಃ** **ದೊಡ್ಡಜ್ಜರ್ ನಿಂಗಪ್ಪ.**

**ತಂದೆಃ** ಮಲ್ಲಪ್ಪ.

**ವಯಸ್ಸುಃ** **75** ವರ್ಷ.

**ಕೆಲಸಃ** ವ್ಯವಸಾಯ.

**ವಾಸಃ** ಲಕ್ಕಶೆಟ್ಟಿಹಳ್ಳಿ, ಹರಿಹರ .

ಇಂದು ದಿನಾಂಕ:**31-08-2024** ರಂದು ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದಃ

ನನಗೆ ಆರೋಪಿಯ ಪರಿಚಯ ಇದೆ. 2005 ವರೆಗೆ ಆರೋಪಿ ನನ್ನಿಂದ ಭತ್ತ ಖರೀದಿ ಮಾಡುತ್ತಿದ್ದನು. ಆತನ ಮೇಲೆ ನಂಬಿಕೆ ಬಂತು. 2010 ರಲ್ಲಿ 88 ಚೀಲ ಭತ್ತವನ್ನು ಆತನಿಗೆ ಕೊಟ್ಟಿರುತ್ತೇನೆ. ಒಂದು ಕ್ವಿಂಟಲ್ 1250 ಆ ಸಮಯದಲ್ಲಿ ಬೆಲೆ ಇತ್ತು. ನಂದಿತಾವರೆ ಮಿಲ್ ನ ವೇಬ್ರಿಡ್ಜ್ ಗೆ ಹಾಕಿದ್ದೆನು. ಆತನಿಗೆ ತೂಕ ಮಾಡಿಸಿ ಬಿಲ್ ಕೊಟ್ಟಿನು. ಒಂದು ತಿಂಗಳ ಬಿಟ್ಟಿದ್ದೆನು. ಆತ 15 ದಿನದಲ್ಲಿ ಹಣಕೊಡುತ್ತೇನೆ ಎಂದು ಹೇಳಿದ್ದನು. ಸುಮಾರು ಒಂದು ತಿಂಗಳ ನಂತರ ನಂದಿತಾವರೆಗೆ ಹೋಗಿದ್ದೇವು. ಅಲ್ಲಿ ಆರೋಪಿ ಎಲ್ಲೋ ಹೋಗಿದ್ದಾನೆ ಎಂದು ಹೇಳಿದ್ದರು. ಸೇರಿದ ಜನರು ಠಾಣೆಗೆ ಹೋದೇವು. ನಂತರ ಠಾಣೆಗೆ ಹೋಗಿ ಫಿರ್ಯಾದಿ ಕೊಟ್ಟಿವು. ಸಾಕ್ಷಿ ತಮ್ಮ ಜಮೀನಿನ ಪಹಣಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-44 ಮತ್ತು 45 ಎಂದು ಗುರುತಿಸಲಾಯಿತು. ಒಂದು ವೇಬ್ರಿಡ್ಜ್ ಬಿಲ್ ನ್ನು ನಿ.ಪಿ-46 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಕೇಳಿದ್ದು, ಸಕಾರಣ ಇಲ್ಲದೇ ಸಮಯಕೇಳಿದ ಕಾರಣ, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**